**ಸಂ: ಲೋಇ:84:ಆಕೋ 3:2001 ಬೆಂಗಳೂರು ದಿನಾಂಕ 25.02.2002**

**ಸುತ್ತೋಲೆ**

ವಿಷಯ: ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಕಾಯ್ದೆ 1999 ಮತ್ತು ನಿಯಮಗಳು 2000ರ ಪ್ರಕಾರ ವೆಬ್ ಸೈಟ್‌ನಲ್ಲಿ ಟೆಂಡರು ಬುಲೆಟಿನ್‌ಗಳನ್ನು ಪ್ರಕಟಿಸಲು ಪ್ಲಾಪಿ ಮುಖಾಂತರ ಮಾಹಿತಿ ಸಲ್ಲಿಸುವ ಬಗ್ಗೆ

ಉಲ್ಲೇಖ: ಸುತ್ತೋಲೆ ಸಂಖ್ಯೆ: ಪಿ.ಡಬ್ಲ್ಯೂ.ಡಿ. 33 ಎಫ್.ಸಿ.3:2001, ದಿನಾಂಕ 21.03.2001

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999, ನಿಯಮಗಳು 2000ದ ನಿಯಮ 4(1) ಮತ್ತು 4(2) ರ ಪ್ರಕಾರ ಪ್ರತಿ ಇಲಾಖೆಗೆ ಹಾಗೂ ಜಿಲ್ಲೆಗೆ ಸಂಬಂಧಿಸಿದಂತೆ ನಿರ್ಮಾಣ ಮತ್ತು ಸರಕುಗಳ ಸರಬರಾಜು ಮತ್ತು ಸೇವೆಗಳ ಪೂರೈಕೆಗಾಗಿ ಜಿಲ್ಲಾ ಟೆಂಡರು ಬುಲೆಟಿನ್ : ರಾಜ್ಯ ಟೆಂಡರು ಬುಲೆಟಿನ್‌ನ್ನು ಪ್ರತಿ ವಾರದಲ್ಲಿ (ಮಾಹಿತಿ ಇದ್ದರೆ ಮಾತ್ರ) ಕೊನೆಯ ಪಕ್ಷ ಒಂದು ಬಾರಿ ಪ್ರಕಟಿಸಬೇಕಾಗಿರುತ್ತದೆ. ಆ ಪ್ರಕಾರ ಕ್ರಮ ಜರುಗಿಸಲು ಈಗಾಗಲೇ ಉಲ್ಲೇಖಿತ ಸುತ್ತೋಲೆಯಲ್ಲಿ ಸೂಚಿಸಲಾಗಿತ್ತು.

ಈಗ ಜಿಲ್ಲಾ ಟೆಂಡರು ಬುಲೆಟಿನ್ ಮತ್ತು ರಾಜ್ಯ ಟೆಂಡರ್ ಬುಲೆಟಿನ್‌ಗಳನ್ನು ವೆಚ್‌ಸೈಟ್‌ನಲ್ಲಿ ಸಹ ಪ್ರಕಟಿಸಲು ತೀರ್ಮಾನಿಸಲಾಗಿದೆ. ಆದುದರಿಂದ ಇನ್ನು ಮುಂದೆ ಎಲ್ಲಾ ಜಿಲ್ಲಾ ಟೆಂಡರು ಬುಲೆಟಿನ್:ರಾಜ್ಯ ಟೆಂಡರು ಬುಲೆಟಿನ್ ಅಧಿಕಾರಿಗಳು ಸಂಬಂಧಪಟ್ಟ ಜಿಲ್ಲಾ:ರಾಜ್ಯ ಟೆಂಡರು ಬುಲೆಟಿನ್‌ಗೆ ಸಂಬಂಧಿಸಿದ ಪೂರ್ಣ ಮಾಹಿತಿಗಳನ್ನು ಪ್ಲಾಪಿಯಲ್ಲಿ ವಾರ್ತಾ ಮತ್ತು ಪ್ರಚಾರ ಇಲಾಖೆ ನಿರ್ದೇಶಕರಿಗೆ ಕಳುಹಿಸುವಂತೆ ಸೂಚಿಸಲಾಗಿದೆ. ಈ ರೀತಿ ನೀಡಿದ ಮಾಹಿತಿಗಳನ್ನು ವೆಚ್‌ಸೈಟ್‌ನಲ್ಲಿ ಪ್ರಕಟಿಸಲು ಕ್ರಮ ಜರುಗಿಸಲಾಗುವುದು.

ಆದುದರಿಂದ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಕಾರ್ಯದರ್ಶಿಗಳು ತಮ್ಮ ಇಲಾಖೆಯ ಟೆಂಡರ್ ಬುಲೆಟಿನ್ ಅಧಿಕಾರಿಗಳಿಗೆ ಸೂಚನೆ ನೀಡಲು ಕೋರಿದೆ. ಜಿಲ್ಲಾ ಟೆಂಡರ್ ಬುಲೆಟಿನ್ ಅಧಿಕಾರಿಗಳಾದ ಜಿಲ್ಲಾಧಿಕಾರಿಗಳು ಕ್ರಮ ಜರುಗಿಸಲು ಸಹ ಸೂಚಿಸಲಾಗಿದೆ. ಈ ಸೂಚನೆಗಳನ್ನು ಕಟ್ಟು ನಿಟ್ಟಾಗಿ ಪಾಲಿಸಲು ಕೋರಿದೆ.

(ಚಿರಂಜೀವಿ ಸಿಂಗ್)
ಸರ್ಕಾರದ ಪ್ರಧಾನ ಕಾರ್ಯದರ್ಶಿ,
ಆರ್ಥಿಕ ಇಲಾಖೆ.